**ಸಿ.ಸಿ.ನಂ.: 3/2024**

ಪಿ.ಡಬ್ಲ್ಯೂ: 2

(ಇಂದು ದಿನಾಂಕಃ **15-04-2025** ರಂದು ಸತ್ಯ ಪ್ರತಿಜ್ಞೆಯ ಮೇರೆಗೆ ಪ್ರಮಾಣ ವಚನ ಬೋಧಿಸಲಾಯಿತು.)

**ಪಾಟೀ ಸವಾಲು -ಆರೋಪಿ ಪರ ಕುಮಾರಿ. ಪಿ. ಎಚ್. ಕೆ. ವಕೀಲರಿಂದ**

ಈ ಪ್ರಕರಣದ ಸಾಲದ ವ್ಯವಹಾರ ನಡೆದಂತಹ ಸಂದರ್ಭದಲ್ಲಿ ಶಾಖಾ ವ್ಯವಸ್ಥಾಪಕರಾಗಿ ಕರ್ತವ್ಯ ನಿರ್ವಹಿಸುತ್ತಿದ್ದವರ ಹೆಸರು ನನಗೆ ನೆನಪಿಗೆ ಬರುತ್ತಿಲ್ಲ. ಸದ್ರಿ ಸಂದರ್ಭದಲ್ಲಿ ಶಾಖಾ ವ್ಯವಸ್ಥಾಪಕರಾಗಿ ಕರ್ತವ್ಯ ನಿರ್ವಹಿಸುತ್ತಿದ್ದವರನ್ನು ನಾನು ಭೇಟ್ಟಿಯಾಗಿರುವುದಿಲ್ಲ. ಸದ್ರಿ ಸಂದರ್ಭದಲ್ಲಿ ಶಾಖಾ ವ್ಯವಸ್ಥಾಪಕರಾಗಿದ್ದವರಿಗೆ ಈ ಪ್ರಕರಣದ ಸಂಪೂರ್ಣ ಮಾಹಿತಿ ಇರುತ್ತದೆ ಎಂದರೆ ಸರಿ. ನಾನು ಈ ದಿನ ನ್ಯಾಯಾಲಯದಲ್ಲಿ ಪ್ರಸ್ತುತ ನಮ್ಮ ಸಿಬ್ಬಂದಿಗಳ ಬಳಿ ಮಾಹಿತಿಯನ್ನು ಪಡೆದುಕೊಂಡು ಸಾಕ್ಷ್ಯ ನುಡಿಯುತ್ತಿದ್ದೇನೆ.

ಪ್ರಸ್ತುತ ನಮ್ಮ ಶಾಖಾ ವ್ಯವಸ್ಥಾಪಕರು ಸ್ಮಿತಾ ಶಾನಭಾಗ ರವರು ಇದ್ದಾರೆ. ವಸೂಲಾತಿ ಅಧಿಕಾರಿ ಎಂದರೆ ಸಾಲ ಬಾಕಿ ಇರುವ ಕಡೆಗೆ ಹೋಗಿ ವಸೂಲು ಮಾಡುವ ಅಧಿಕಾರಿ ಎಂದರೆ ಸರಿ. ವಸೂಲಾತಿ ಅಧಿಕಾರಿಗೆ ಬೇರೆ ಬೇರೆ ಕಡೆಗೆ ವಸೂಲಾತಿಗೆ ಹೋಗುವುದರಿಂದ ಬ್ಯಾಂಕಿನಲ್ಲಿ ನಡೆಯುವ ವಿಷಯಗಳ ಬಗ್ಗೆ ಮಾಹಿತಿ ಇರುವುದಿಲ್ಲ ಎಂದರೆ ಸರಿಯಲ್ಲ. ಆರೋಪಿತನು ಈ ಪೂರ್ವದಲ್ಲಿ ಫಿರ್ಯಾದಿ ಸಂಸ್ಥೆ ಯಲ್ಲಿ ಸಾಲವನ್ನು ಪಡೆದುಕೊಂಡಿರುವ ವಿಷಯ ನನಗೆ ನೆನಪಿಗೆ ಬರುತ್ತಿಲ್ಲ.

ಆರೋಪಿತನು ಈ ಪ್ರಕರಣದಲ್ಲಿ ವ್ಯಾಪಾರಕ್ಕಾಗಿ ಸಾಲದ ಅರ್ಜಿಯನ್ನು ಸಲ್ಲಿಸಿದ್ದು, ಆತನು ಯಾವ ವ್ಯಾಪಾರವನ್ನು ಮಾಡುತ್ತಾನೆ ಎಂಬ ಬಗ್ಗೆ ನನಗೆ ತಿಳಿದಿಲ್ಲ. ಸಾಲಕ್ಕಾಗಿ ಅರ್ಜಿ ಬಂದಂತಹ ಸಂದರ್ಭದಲ್ಲಿ ಸದ್ರಿ ಅರ್ಜಿಯಲ್ಲಿ ನಮೂದಿಸಿದ ವಿಷಯಗಳನ್ನು ತಿಳಿದುಕೊಂಡು ನಾವು ಸಾಲ

ಮಂಜೂರು ಮಾಡುತ್ತೇವೆ ಎಂದರೆ ಸರಿ. ಈ ಪ್ರಕರಣದ ಸಾಲಕ್ಕೆ ಸಂಬಂಧಿಸಿದಂತೆ ಆರೋಪಿತನಿಂದ ಆತನ ವ್ಯಾಪಾರದ ಕುರಿತು ಯಾವುದೇ ದಾಖಲಾತಿಗಳನ್ನು ಪಡೆದುಕೊಂಡಿರುವುದಿಲ್ಲ. ನಾವು ಸಾಲಕ್ಕಾಗಿ ಅರ್ಜಿ ಬಂದಂತಹ ಸಂದರ್ಭದಲ್ಲಿ ಸದ್ರಿ ಅರ್ಜಿಯೊಂದಿಗೆ ಲಗತ್ತಿಕರಿಸಿದ ಎಲ್ಲಾ ದಾಖಲಾತಿಗಳನ್ನು ಆಡಳಿತ ಮಂಡಳಿಯ ಸಭೆಯಲ್ಲಿ ಇಡುತ್ತೇವೆ ಎಂದರೆ ಸರಿ. ಈ ಪ್ರಕರಣದ ಸಾಲಕ್ಕೆ ಸಂಭಂಧಿಸಿದಂತೆ ಸಾಲದ ಅರ್ಜಿಯೊಂದಿಗೆ ಸಾಲಗಾರದ ಆಧಾರ ಕಾರ್ಡ್‌ನ್ನು ಆಡಳಿತ ಮಂಡಳಿಯ ಸಭೆಯಲ್ಲಿ ಇಟ್ಟಿರುತ್ತೇವೆ.

4 ಲಕ್ಷ ಎಂದರೆ ದೊಡ್ಡ ಮೊತ್ತ ಎಂದರೆ ಸರಿ. ಅರೋಪಿತನಿಗೆ 4 ಲಕ್ಷ ಸಾಲ ನೀಡಬೇಕಾದರೆ ಆತನಿಂದ ಪಹಣಿ ಪತ್ರಿಕೆ, LIC Bond, ಇಂತಹ ಯಾವುದೇ ದಾಖಲಾತಿಗಳನ್ನು ಪಡೆದುಕೊಂಡಿರುವುದಿಲ್ಲ. ನಿಪಿ 7 ಫಿರ್ಯಾದಿ ಸಂಸ್ಥೆಯ ನಮೂನೆ ಎಂದರೆ ಸರಿ. ನಿಪಿ 7 ರಲ್ಲಿ ನಮೂದಿಸಿದ ವಿಷಯಗಳು ಸುಳ್ಳಾಗಿದ್ದಂತಹ ಸಂದರ್ಭದಲ್ಲಿ ಹಾಗೂ ನಮೂದಿಸಿದ ಅಂಶಗಳು ತಪ್ಪಾಗಿದ್ದಂತಹ ಸಂದರ್ಭದಲ್ಲಿ ಸದ್ರಿ ಸಾಲದ ಅರ್ಜಿಗಳು ತೀರಸ್ಕೃತಗೊಳ್ಳುತ್ತವೆ ಎಂದರೆ ಸರಿ.

ಆರೋಪಿತನು ನಮ್ಮ ಫಿರ್ಯಾದಿ ಸಂಸ್ದೆಯಲ್ಲಿ ಈ ಹಿಂದೆ ಸಾಲವನ್ನು ಪಡೆದ್ದರೆ ಅದನ್ನು ಸಾಲದ ಅರ್ಜಿಯಲ್ಲಿ ನಮೂದಿಸಬೇಕು ಎಂದರೆ ಸರಿ. ಸಾಲದ ಅರ್ಜಿಗಳನ್ನು ಶಾಖಾ ವ್ಯವಸ್ಥಾಪಕರು ಪರಿಶೀಲಿಸುತ್ತಾರೆ. ನಿಪಿ 7 ರಲ್ಲಿ ಆರೋಪಿತನು ಈ ಹಿಂದೆ ಪಡೆದ Cash Credit ಸಾಲವನ್ನು ಮರು ಪಾವತಿ ಮಾಡಿದ್ದಾನೆ ಎಂದು ನಮೂದು ಇದ್ದು, ಸದ್ರಿ ಸಾಲವನ್ನು ಆರೋಪಿತನು ಯಾವ ದಿನಾಂಕದಂದು ಮರು ಪಾವತಿ ಮಾಡಿದ್ದಾನೆ ಎಂದು ನನಗೆ ನೆನಪಿಗೆ ಬರುತ್ತಿಲ್ಲ.

**ಸಿ.ಸಿ.ನಂ.: 3/2024**

ಪಿ.ಡಬ್ಲ್ಯೂ: 2

ದಿಃ 17/09/2021 ರಂದು ಒಟ್ಟೂ ಎಷ್ಟು ಸಾಲದ ಅರ್ಜಿಗಳಿಗೆ ಸಾಲವನ್ನು ಮಂಜೂರು ಮಾಡಿರುತ್ತೇವೆ ಎಂಬ ಬಗ್ಗೆ ನನಗೆ ನೆನಪಿಗೆ ಬರುತ್ತಿಲ್ಲ. ಆರೋಪಿತನಿಗೆ ಸಾಲವನ್ನು ನೀಡುವಂತೆ ಆದ ಆಡಳಿತ ಮಂಡಳಿಯ ಠರಾವನ್ನು ನಾವು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. ಸದ್ರಿ ದಾಖಲಾತಿಯು ಫಿರ್ಯಾದಿ ಸಂಸ್ಥೆಯ ದಾಖಲಾತಿ ಆಗಿರುವುದರಿಂದ ಅದನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ಯಾವುದೇ ತೊಂದರೆ ಇರುವುದಿಲ್ಲ,

**(ಈ ಹಂತದಲ್ಲಿ ಆರೋಪಿ ಪರ ವಕೀಲರು ಮುಂದುವರೆದ ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದರಿಂದ ಸಮಯವಕಾಶ ನೀಡಲಾಯಿತು)**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ. ಸರಿ ಇದೆ.

ಸಹಿ ಇದೆ.

ಹೆ.ಪ್ರ.ದ.ನ್ಯಾ.ದಂ. ಕುಮಟಾ